ಬೀದಿಯುವನೊಬ್ಬ.
ನಿನ್ನೆ ಲಾರಿಗೆ ಸಿಕ್ಕಿ ಸತ್ತನಂತೆ.
ಸತ್ತವನು ನಾನಲ್ಲವೆಂದು ನನಗೂ ಗೊತ್ತು.
ಆದರೂ ಕನ್ನಡಿಯಲ್ಲಿ ಇಣುಕಿ ನೋಡಿದೆ'

ಈ ಪದ್ಯ ನನಗೆ ನೆನಪಾಯಿತು. ನಡೆಯುತ್ತಿದ್ದ ನನಗೇನಾಯಿತೋ ಗೊತ್ತಿಲ್ಲ. ಕಾರಣವಿಲ್ಲದೆ ಮುಗ್ಗರಿಸಿ ಬಿದ್ದೆ.

ಬೆಳಿಗ್ಗೆ ಏಳು ಗಂಟೆ ಸಮಯ. ಮಲ್ಲೇಶ್ವರದ 17ನೇ ಕ್ರಾಸು. ಜನಗಳು ಕಡಿಮೆ. ಬಾಯಿ ತುಂಬಾ ಬಳಬಳ ರಕ್ತ, 6 ಹಲ್ಲುಗಳು 'ಅಲ್ಲಾಡ್ಸು ಅಲ್ಲಾಡ್ಸು' ಅಂತ ಹಾಡು ಹೇಳುತ್ತಿದ್ದವು. ನೇರವಾಗೇ ಮುಖಕ್ಕೆ ಪೆಟ್ಟು ಬಿದ್ದಿತ್ತು. ಹತ್ತಿರದಲ್ಲೇ ಮನೆ ಇತ್ತು. ನಾನು ಬೇಗ ಮನೆಗೆ ಬಂದೆ. ಮನೆಮಂದಿ ನನ್ನ ಅವಸ್ಥೆ ನೋಡಿ ಗಾಬರಿಯಾದರು. ನನ್ನ ಮಗ ಶ್ರೀಹರ್ಷ, ನನ್ನ ಸೊಸೆ ಅನುಷಾ, 'ಇವತ್ತು ಶನಿವಾರ, ನಮ್ಮಿಬ್ಬರಿಗೂ ರಜಾ ಇದೆ. ಇವತ್ತು ಬಿದ್ದಿದ್ದು ಒಳ್ಳೇದಾಯ್ತು' ಎಂದು ಮಣಿಪಾಲ್ ಆಸ್ಪತ್ರೆಗೆ ಸೇರಿಸಿದರು.

ಅಲ್ಲಿ ಭಾಷಣಕಾರನ ಬಾಯಿಗೆ ಹೊಲಿಗೆ ಹಾಕಲೇಬೇಕು ಎಂಬ ತೀರ್ಮಾನ ಸರ್ವಾನುಮತದಿಂದ ಅಂಗೀಕಾರ ಆಯಿತು. ಹಲ್ಲುಗಳು ಜಖಂ ಆಗಿ ತುಟಿ ಹರಿದಿತ್ತು. ನಾನು 'ಬೇಡ, ಮರುದಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ನನ್ನದೇ ಮುಖ್ಯ ಭಾಷಣ' ಎಂದೆ. ಹೊಲಿಗೆ ಹಾಕಲಿಲ್ಲವಾದರೆ

